# ಕೋವಿಡ್ 19 ಸಾಂಕ್ರಾಮಿಕ ಅವಧಿಯಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಗರ್ಭಿಣಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಲಸಿಕೆ ಹಾಕಲು ಸಲಹೆಗಳು

**ಸತ್ರ (ಸೆಷನ್ಸ್) ಗಳ ಯೋಜನೆ ಮತ್ತು ಲಸಿಕಾಕರಣಕ್ಕಾಗಿ ಮಕ್ಕಳ ಆಯ್ಕೆ:-**

1. ಗರ್ಭಿಣಿ ಮಹಿಳೆಯರಿಗೆ 2 ವರಸೆ ಟಿಡಿ ಲಸಿಕೆಯನ್ನು ತಪ್ಪದೇ ನೀಡುವುದು.
2. ಆಸ್ಪತ್ರೆಯಲ್ಲಿ ಜನಿಸಿದ ಮಕ್ಕಳಿಗೆ ಹುಟ್ಟಿದ ತಕ್ಷಣ ನೀಡಲಾಗುವ ಬಿಸಿಜಿ, ಓಪಿವಿ ಮತ್ತು ಹೆಪಟೈಟಿಸ್-ಬಿ ಲಸಿಕೆಗಳನ್ನು ತಪ್ಪದೇ ನೀಡುವುದು.
3. ಕೋವಿಡ್ 19 ವಿರುದ್ಧ ಸಾಮಾಜಿಕ ಅಂತರ, ವೈಯಕ್ತಿಕ ರಕ್ಷಣೆ ಮತ್ತು ಸೋಂಕು ನಿಯಂತ್ರಣ ಅಭ್ಯಾಸಗಳನ್ನು ಖಾತ್ರಿಪಡಿಸಿಕೊಂಡು ವಾರಕ್ಕೊಮ್ಮೆ(ಗುರುವಾರ) ಮಾತ್ರ ಲಸಿಕಾಕರಣದ ಸತ್ರಗಳನ್ನು ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು, ಜಿಲ್ಲಾ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳ ಎಂಸಿಹೆಚ್ ಬ್ಲಾಕ್‌ಗಳಲ್ಲಿ ಮಾತ್ರ ಆಯೋಜಿಸಬೇಕು.
4. ಲಸಿಕಾ ಕೇಂದ್ರಗಳಿಗೆ ಮಕ್ಕಳನ್ನು ಕರೆತರಲು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರನ್ನು ಬಳಸಿಕೊಳ್ಳುವುದು.
5. ***Containment Zone* ಗಳಲ್ಲಿ ಲಸಿಕಾ ಸತ್ರಗಳನ್ನು ನಡೆಸಬಾರದು.**
6. ಕೋವಿಡ್ 19 Containment Zone ಕಣ್ಗಾವಲು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ತಂಡಗಳನ್ನು ಯಾವುದೇ ಕಾರಣಕ್ಕೂ **ಲಸಿಕಾ ಚಟುವಟಿಕೆಗಳಿಗೆ ತೊಡಗಿಸಿಕೊಳ್ಳಬಾರದು.**
7. ಲಸಿಕಾಕರಣದ ಕೊಠಡಿಗೆ ಪ್ರವೇಶಿಸಲು ಮತ್ತು ಹೊರ ಹೋಗಲು ಪ್ರತ್ಯೇಕ ಪ್ರವೇಶದ್ವಾರ ಇಟ್ಟುಕೊಳ್ಳುವುದು ಸೂಕ್ತ.
8. ಎಂಸಿಹಚ್ ಬ್ಲಾಕ್‌ಗಳಲ್ಲಿ ಲಸಿಕಾ ಸತ್ರಗಳನ್ನು ನಡೆಸಲಾಗದ ಪಕ್ಷದಲ್ಲಿ ಮಾತ್ರ ತಾಲ್ಲೂಕು ಆಸ್ಪತ್ರೆಯ ಸಮೀಪದಲ್ಲಿರುವ ಯಾವುದೇ ಸೂಕ್ತ ಸ್ಥಳವನ್ನು ಆಯ್ದುಕೊಂಡು ಉದಾಹರಣೆಗೆ ಶಾಲೆಗಳು, ತಾಲ್ಲೂಕು ಕಛೇರಿ, ಮೀಟಿಂಗ್ ಹಾಲ್‌ಗಳು, ಸಮುದಾಯ ಭವನದಂತಹ ಸ್ಥಳಗಳನ್ನು ಆಯ್ಕೆಮಾಡಿಕೊಳ್ಳಬಹುದು.
9. ಬಿಬಿಎಂಪಿ ಮತ್ತು ಇತರ ನಗರ ಪ್ರದೇಶಗಳಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಹೆರಿಗೆ ಆಸ್ಪತ್ರೆಗಳಲ್ಲಿ ಲಸಿಕಾ ಸತ್ರಗಳನ್ನು ನಡೆಸಬಹುದು. ಆದರೆ **ಜ್ವರ ಚಿಕಿತ್ಸಾಲಯಗಳಾಗಿ (Fever Clinic) ಪರಿವರ್ತಿತವಾಗಿರುವ ಆಸ್ಪತ್ರೆಗಳನ್ನು ಲಸಿಕಾ ಸತ್ರಗಳನ್ನು ಕಟ್ಟುನಿಟ್ಟಾಗಿ ನಡೆಸಲೇಬಾರದು.** ಇಂತಹ ಸಂದರ್ಭದಲ್ಲಿ ಹತ್ತಿರದ ಯಾವುದಾದರೂ ಶಾಲೆ, ಹೆರಿಗೆ ಆಸ್ಪತ್ರೆಯಂತಹ ಸೂಕ್ತ ಸ್ಥಳಗಳನ್ನು ಲಸಿಕೆ ನೀಡಿಕೆಗಾಗಿ ಆಯ್ದುಕೊಳ್ಳುವುದು.
10. **ಕೋವಿಡ್ 19 ಗಾಗಿ ಗೊತ್ತುಪಡಿಸಿದ ಆಸ್ಪತ್ರೆಗಳಲ್ಲಿ (Designated COVID-19 Hospitals) ಲಸಿಕಾ ಸತ್ರಗಳನ್ನು ನಡೆಸಬಾರದು.**
11. ಆಶಾ ಕಾರ್ಯಕರ್ತೆಯರು ತಮ್ಮ ಪ್ರದೇಶದಲ್ಲಿ ಲಸಿಕೆ ತಪ್ಪಿಹೋದ/ ಬಿಟ್ಟು ಹೋದ (ವಂಚಿತರಾದ) ಮಕ್ಕಳನ್ನು ಒಳಗೊಂಡಂತೆ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕು.
12. ಸ್ಲಮ್‌ಗಳು, ಅಲೆಮಾರಿ ಜನಾಂಗ ಮತ್ತು ದುರ್ಬಲ ಜನಸಮುದಾಯಕ್ಕೆ ಆದ್ಯತೆ ನೀಡಬೇಕು.
13. ಲಸಿಕಾ ಸತ್ರ ನಡೆಸುವ ಸ್ಥಳ ಹಾಗೂ ಸಮಯದ ಬಗ್ಗೆ ಆಶಾ ಕಾರ್ಯಕರ್ತೆಯರು ತಾಯಂದರಿಗೆ ಮತ್ತು ಆರೈಕೆದಾರರಿಗೆ ದೂರವಾಣಿ ಮೂಲಕ ಮಾಹಿತಿ ನೀಡಬೇಕು ಮತ್ತು ಲಸಿಕಾ ಸತ್ರ ನಡೆಸುವ ಸ್ಥಳಕ್ಕೆ ಗೊತ್ತುಪಡಿಸಿದ ಸಮಯದಲ್ಲಿ **ಒಬ್ಬ ಆರೋಗ್ಯವಂತ ಆರೈಕೆದಾರ/ ಪೋಷಕರು ಮಾತ್ರ ಮಗುವಿನೊಂದಿಗೆ ಬರಬೇಕು ಎಂದು ತಿಳಿಸಬೇಕು. ಬರುವಾಗ ಮುಖ ಕವಚವನ್ನು ಧರಿಸುವುದು ಸೂಕ್ತ.**

ಜಿಲ್ಲೆಯ ಅನುಕೂಲಕ್ಕೆ ತಕ್ಕಂತೆ ಲಸಿಕಾ ಸತ್ರದ ಸಮಯವನ್ನು ನಿಗದಿಪಡಿಸಿಕೊಳ್ಳಬಹುದು ಮತ್ತು ಆ ಮಾಹಿತಿಯನ್ನು ಪೋಷಕರಿಗೆ ಮುಂಚಿತವಾಗಿ ತಿಳಿಸುವುದು.

**14.** ಪ್ರತಿ ಸತ್ರದಲ್ಲಿ ಕೇವಲ 15–20 ಫಲಾನುಭವಿಗಳಿಗೆ ಮಾತ್ರ ಲಸಿಕೆ ನೀಡುವ ಯೋಜನೆ ಹಾಕಿಕೊಳ್ಳುವುದು ಮತ್ತು ಹೆಚ್ಚಿನ ಸಂಖ್ಯೆಯ ಮಕ್ಕಳನ್ನು ನಿರೀಕ್ಷಿಸಿದ್ದರೆ ವಾರದಲ್ಲಿ ಎರಡು ಬಾರಿ ಸೆಷನ್‌ಗಳನ್ನು ಯೋಜಿಸಬಹುದು ಮತ್ತು ಆ ದಿನಾಂಕಗಳ ಮಾಹಿತಿಯನ್ನು ಮೊದಲೇ ತಾಯಂದಿರಿಗೆ / ಆರೈಕೆದಾರರಿಗೆ ಆಶಾಗಳು ನೀಡಬೇಕು. **ಲಸಿಕಾ ಸತ್ರಕ್ಕೆ ಮಕ್ಕಳನ್ನು ಗೊತ್ತುಪಡಿಸಿದ ಸಮಯದಲ್ಲಿಯೆ ಕರೆತರುವಂತೆ ಕಾರ್ಯಕ್ರಮ ಪಟ್ಟಿ ಅಯೋಜಿಸುವುದು.**

15. ಎಲ್ಲಾ ಲಸಿಕೆಗಳನ್ನು ಮತ್ತು ಅವುಗಳ ಸರಬರಾಜನ್ನು ಮೊದಲೇ ಸಿದ್ಧಪಡಿಸಿಕೊಂಡು ಫಲಾನುಭವಿಗಳ ಪಟ್ಟಿಯ ಪ್ರಕಾರ ಆಯೋಜಿಸಬೇಕು.

16. ಶೀತಲ ಸರಪಳಿಯ ನಿರ್ವಹಣೆ ಮತ್ತು ಲಸಿಕಾ ಸತ್ರಗಳಲ್ಲಿ ಉತ್ಪತ್ತಿಯಾಗುವ ಲಸಿಕೆಗಳ ತ್ಯಾಜ್ಯವನ್ನು ಸೂಕ್ತ ನಿರ್ವಹಣೆ ಮತ್ತು ವಿಲೇವಾರಿ ಮಾಡುವುದನ್ನು ಮಾರ್ಗಸೂಚಿಗಳ ಪ್ರಕಾರ ಕಟ್ಟುನಿಟ್ಟಾಗಿ ನಿರ್ವಹಿಸಬೇಕು.

17. ಭಾರತ ಸರ್ಕಾರದಿಂದ ನೀಡಲಾಗಿರುವ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

***Containment Zone** ಅಂದರೆ ಕೋವಿಡ್ ಧೃಡೀಕೃತಗೊಂಡಿರುವ ವ್ಯಕ್ತಿಯು ವಾಸಿಸುವ ಸುತ್ತಲಿನ ನಿರ್ದಿಷ್ಟ ವಲಯ ಅಥವಾ ಹತ್ತಕ್ಕೂ ಹೆಚ್ಚು ಸಂಪರ್ಕಿತರು ಇರುವ ವಲಯ ಮತ್ತು ಈ ವಲಯದಲ್ಲಿ ವೈರಾಣುವಿನ ಸೋಂಕನ್ನು ತಡೆಗಟ್ಟಲು ಕಟ್ಟನಿಟ್ಟಾದ ತೀವ್ರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಬಿಬಿಎಂಪಿ ನ್ಯಾಯವ್ಯಾಪ್ತಿ ವಲಯದಲ್ಲಿ ಆಯುಕ್ತರು ಬಿಬಿಎಂಪಿ ರವರು ಮತ್ತು ಇತರೆ ಸ್ಥಳಗಳಲ್ಲಿ ಡೆಪ್ಯೂಟಿ ಕಮಿಷನರ್ ರವರಿಂದ Containment Zone ಅಧಿಸೂಚಿತ ಪ್ರದೇಶಗಳ ಮಾಹಿತಿಯನ್ನು ಪಡೆಯಬಹುದು.

**ಆರೋಗ್ಯ ಕಾರ್ಯಕರ್ತರಿಂದ ಪೂರ್ವಭಾವಿ ಪರಿಶೀಲನೆ:–**

**1.** ಜ್ವರ, ಕೆಮ್ಮು, ಶೀತ ಇಂತಹ Influenza like illness (ILI) ಯಾವುದೇ ತೊಂದರೆಗಳು ಮಗುವಿಗಾಗಲೀ ಅಥವಾ ಪೋಷಕರು/ಆರೈಕೆದಾರರಿಗೆ ಇದ್ದಲ್ಲಿ **ಲಸಿಕೆ ನೀಡಿಕೆಯನ್ನು ಅವಶ್ಯವಾಗಿ ಮುಂದೂಡುವುದು.**

**2.** ಯಾವುದೇ ಕಿರಿಯ ಆರೋಗ್ಯ ಸಹಾಯಕಿಯರು ಅಥವಾ ಶುಶ್ರೂಷಕಿಯರಿಗೆ ಜ್ವರ, ಕೆಮ್ಮು, ಶೀತ ಇಂತಹ Influenza like illness (ILI) ಯಾವುದೇ ತೊಂದರೆಗಳು ಇದ್ದಲ್ಲಿ ಅಂತಹವರು ಲಸಿಕಾ ಸತ್ರಗಳನ್ನು ನಡೆಸಬಾರದು. ಮತ್ತು ಅಂತಹವರನ್ನು ಕೋವಿಡ್ ಪರೀಕ್ಷೆಗಾಗಿ ತಕ್ಷಣವೇ ಸೂಚಿಸಬೇಕು.

**3.** ಮಗುವಿಗೆ ಲಸಿಕೆ ನೀಡುವ ಮೊದಲು ಮಗುವಿನ ಆರೋಗ್ಯದ ಸಂಪೂರ್ಣ ಮಾಹಿತಿ ಪಡೆದಿರಬೇಕು. ಮತ್ತು ಖಾತ್ರಿಪಡಿಸಿಕೊಂಡ ನಂತರವಷ್ಟೆ ಸೋಂಕು ನಿವಾರಣಾ ಮತ್ತು ನಿಯಂತ್ರಣ ಅಭ್ಯಾಸಗಳನ್ನು ಪಾಲಿಸಿ ಮಗುವಿಗೆ ಲಸಿಕೆ ನೀಡಬೇಕು.

**4.** ಮಗುವಿನ ಆರೋಗ್ಯದ ಬಗ್ಗೆ ಯಾವುದೇ ಸಣ್ಣ ಸಂದೇಹವಿದ್ದಲ್ಲಿ, ಕಿರಿಯ ಆರೋಗ್ಯ ಸಹಾಯಕಿಯರು ಮಗು ಚೇತರಿಸಿಕೊಳ್ಳುವವರೆಗೆ ಅಂತಹ ಮಗುವಿಗೆ ಲಸಿಕೆ ನೀಡುವಿಕೆಯನ್ನು ಮುಂದೂಡಬೇಕು. ಮಗುವು ಆರೋಗ್ಯದಿಂದಿರುವುದನ್ನು ಖಾತ್ರಿ ಪಡಿಸಿಕೊಂಡ ನಂತರವೇ ಲಸಿಕೆಯನ್ನು ನೀಡುವುದು.

**ಲಸಿಕಾ ಸತ್ರಗಳಲ್ಲಿ ಸುರಕ್ಷಿತ ಲಸಿಕೆ ನೀಡುವಿಕೆ ಕ್ರಮಗಳು:–**

1. ಪ್ರತಿ ಲಸಿಕಾ ಸತ್ರಗಳನ್ನು ನಡೆಸುವ ಮೊದಲು ಮತ್ತು ನಂತರ ಲಸಿಕಾ ಸತ್ರ ನಡೆಸುವ ತಾಣವನ್ನು 1% ಹೈಪೋಕ್ಲೋರೈಟ್ ದ್ರಾವಣದಿಂದ ಸ್ವಚ್ಛಗೊಳಿಸಬೇಕು.
2. ಕೈ ತೊಳೆಯಲು ಸತ್ರ ನಡೆಸುವ ಸ್ಥಳದಲ್ಲಿ ಸೋಪು ಮತ್ತು ನೀರು ಲಭ್ಯವಿರಬೇಕು.
3. ಆರೈಕೆ ಮಾಡುವವರ ಆಸನಕ್ಕಾಗಿ ಗುರುತು ಮಾಡಲು ಸತ್ರಗಳಲ್ಲಿ ಸೀಮೆಸುಣ್ಣ ಲಭ್ಯವಾಗುವಂತೆ ನೋಡಿಕೊಳ್ಳುವುದು. ಇದು ಲಸಿಕೆ ಹಾಕಿಸಿಕೊಳ್ಳಲು ಕಾಯುವಾಗ ಮತ್ತು ಸರದಿಯಲ್ಲಿ ಮುಂದುವರೆಯಲು ಸಹಕಾರಿಯಾಗಿರುತ್ತದೆ.
4. ಆರೋಗ್ಯ ಕಾರ್ಯಕರ್ತರು ಉಸಿರಾಟದ ನೈರ್ಮಲ್ಯ ಕಾಪಾಡಲು ಮೂಗು, ಬಾಯಿ ಮತ್ತು ಗಲ್ಲವನ್ನು ಮುಚ್ಚುವಂತಹ ಮೂರು ಪದರಗಳುಳ್ಳ ಸರ್ಜಿಕಲ್ ಮಾಸ್ಕ್ ಧರಿಸಬೇಕು.
5. ಸತ್ರಗಳಲ್ಲಿ ಭಾಗವಹಿಸುವ ಎಲ್ಲರೂ ಕೆಮ್ಮುವಾಗಿನ ಶಿಷ್ಟಾಚಾರ ಮತ್ತು ಕೈಗಳ ನೈರ್ಮಲ್ಯವನ್ನು ಪಾಲಿಸಬೇಕು ಮತ್ತು ಶಿಕ್ಷಣ ನೀಡಬೇಕು.
6. ಯಾವುದೇ ನಿರ್ಜೀವ ವಸ್ತುಗಳನ್ನು ಅಥವಾ ಮೇಲ್ಮೈಗಳನ್ನು ಸ್ಪರ್ಶಿಸಿದ ನಂತರ ಆರೈಕೆದಾರರು ಕೈಗಳನ್ನು ತೊಳೆಯದೆ ಅಥವಾ ಕೈಗಳನ್ನು ಸ್ವಚ್ಛಗೊಳಿಸದೆ ಅಥವಾ ಮಗುವಿನ ಕಣ್ಣು, ಮೂಗು, ಬಾಯಿ ಮುಟ್ಟದಂತೆ ಸತ್ರಗಳಲ್ಲಿ ಭಾಗವಹಿಸುವವರಿಗೆ ಶಿಕ್ಷಣ ನೀಡಬೇಕು.
7. ಲಸಿಕೆ ಹಾಕುವವರು ಪ್ರತಿ ಮಗುವಿಗೆ ಲಸಿಕೆ ಹಾಕುವ ಮೊದಲು ಮತ್ತು ನಂತರ ಸುಮಾರು 20 ಸೆಕೆಂಡ್‌ಗಳ ಕಾಲ ತಮ್ಮ ಕೈಗಳನ್ನು ಕಡ್ಡಾಯವಾಗಿ ಸ್ವಚ್ಛಗೊಳಿಸಬೇಕು.
8. ಮಕ್ಕಳ ಪಾಲನೆ ಮಾಡುವವರು ಲಸಿಕಾ ಸತ್ರ ನಡೆಯುವ ಕೊಠಡಿಗೆ ಪ್ರವೇಶಿಸುವ ಮೊದಲು ಕೈ ತೊಳೆಯುವುದು/ ಕೈ ಸ್ವಚ್ಛಗೊಳಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
9. ಲಸಿಕಾ ಸತ್ರ ನಡೆಯುವ ಕೊಠಡಿಯಲ್ಲಿ ಮತ್ತು ಸತ್ರದ ಕೊಠಡಿಯ ಹೊರಗೆ ಫಲಾನುಭವಿಗಳ ನಡುವೆ 1 ಮೀಟರ್ ಅಂತರವನ್ನು ಕಾಯ್ದುಕೊಳ್ಳಬೇಕು.
10. ಒಂದು ಮಗುವಿಗೆ ಒಮ್ಮೆಗೆ ಒಬ್ಬರೇ ಲಸಿಕೆ ನೀಡುವ ಕಾರ್ಯಕರ್ತರು ಇರಬೇಕು. ಅದೇ ಕಾರ್ಯಕರ್ತೆಯು ನೈರ್ಮಲ್ಯದ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು ಮತ್ತು ಲಸಿಕೆಗಳನ್ನು ನಿರ್ವಹಿಸುವಂತಿರಬೇಕು. ತಾಯಿ ಕಾರ್ಡ್ ಮಾಹಿತಿ ಭರ್ತಿಮಾಡಲು, ಫಲಾನುಭವಿಗಳ ಸಮಾಜಿಕ ಅಂತರವನ್ನು ಕಾಪಾಡಲು ಮತ್ತು ನಾಲ್ಕು ಪ್ರಮುಖ ಸಂದೇಶಗಳನ್ನು ತಲುಪಿಸಲು ಇತರೆ ಸಿಬ್ಬಂದಿಗಳನ್ನು ತೊಡಗಿಸಿಕೊಳ್ಳುವುದು, ಕೋವಿಡ್ 19 ರ ಜಾಗೃತಿ ಸಂದೇಶಗಳನ್ನು ಸಹ ಪ್ರಸಾರ ಮಾಡಬಹುದು.
11. ಲಸಿಕೆ ನೀಡಿದ ನಂತರ ಮಗುವನ್ನು 30 ನಿಮಿಷಗಳ ಕಾಲ ಗಮನಿಸುತ್ತಿರಬೇಕು.
12. ಅಗತ್ಯವಿದ್ದಲ್ಲಿ ಸಂಪರ್ಕಿಸಲು ಆಶಾ, ಕಿರಿಯ ಮಹಿಳಾ ಆರೋಗ್ಯ ಕಾರ್ಯಕರ್ತೆಯರ ಮತ್ತು ವೈದ್ಯಾಧಿಕಾರಿಗಳ ದೂರವಾಣಿ ಸಂಖ್ಯೆಯನ್ನು ಪೋಷಕರೊಂದಿಗೆ/ ಆರೈಕೆದಾರರೊಂದಿಗೆ ಹಂಚಿಕೊಳ್ಳಬೇಕು ಮತ್ತು ಲಸಿಕೆ ನೀಡಿದ ನಂತರ ಯಾವುದೇ ಸೌಮ್ಯ, ತೀವ್ರ, ಗಂಭೀರ ಅಡ್ಡ ಪರಿಣಾಮಗಳು(ಎಇಎಫ್ಐ) ಉಂಟಾದಲ್ಲಿ ತಕ್ಷಣ ಕರೆಮಾಡುವಂತೆ ಸೂಚಿಸಬೇಕು.
13. ಆಶಾ, ಅಂಗನವಾಡಿ ಕಾರ್ಯಕರ್ತೆಯರು ಲಸಿಕೆ ಹಾಕಿಸಿಕೊಂಡಿರುವ ಫಲಾನುಭವಿಗಳನ್ನು ಮರುದಿನ ಭೇಟಿ ಮಾಡಿ ಅವರ ಆರೋಗ್ಯದ ಕುರಿತು ವಿಚಾರಿಸುವುದು.

**ಲಸಿಕಾ ಸತ್ರಗಳಿಗೆ ಫಲಾನುಭವಿಗಳನ್ನು ಕರೆತರುವ ಬಗ್ಗೆ:–**

1. As per MHA order No. 40-3/2020-DM-I(A) dated 24.3.2020 and further modified on 25.3.2020, 27.3.2020, 2.4.2020 and 3.4.2020 (https://mha.gov.in/sites/default/files/PR Consolidated%20Guidelines%20of%20

MHA 28032020%20%281%29 0.PDF), Essential health services are exempted and list is given in the letter.

2. ತಾಯಿ ಕಾರ್ಡ್/ ಇಮ್ಯೂನೈಸೇಶನ್ ಕಾರ್ಡ್ ಹೊಂದಿರುವ ಅರ್ಹ ಫಲಾನುಭವಿಗಳು ಲಸಿಕಾ ಸತ್ರ ನಡೆಸುವ ಸ್ಥಳವನ್ನು ತಲುಪಲು ಅನುಕೂಲವಾಗುವಂತೆ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪೊಲೀಸ್ ಇಲಾಖೆಗೆ ಪೂರ್ವ ಅನುಮತಿ ನೀಡಬೇಕು ಮತ್ತು ಸಹಕರಿಸಲು ಕೋರಬೇಕು.
3. ಜಿಲ್ಲೆಗಳಲ್ಲಿ ಲಭ್ಯವಿರುವ 108, ನಗು ಮಗು, ಮೊಬೈಲ್ ಮೆಡಿಕಲ್ ಯುನಿಟ್, ರಾಷ್ಟ್ರೀಯ ಬಾಲಸ್ವಾಸ್ಥ್ಯಕಾರ್ಯಕ್ರಮ ವಾಹನಗಳನ್ನು ಬಳಸಿಕೊಂಡು ಫಲಾನುಭವಿಗಳನ್ನು ಲಸಿಕಾ ಸತ್ರಗಳಿಗೆ ಕರೆತರಲು ಮತ್ತು ಫಲಾನುಭವಿಗಳನ್ನು ಮನೆಗೆ ತಲುಪಿಸಲು ಬಳಸಬಹುದು.
4. ಅಂಗನವಾಡಿ ಕಾರ್ಯಕರ್ತೆಯರು / ಸಹಾಯಕಿಯರು ಮತ್ತು ಲಿಂಕ್ ಕಾರ್ಯಕರ್ತೆಯರನ್ನು ಸತ್ರ ನಡೆಸುವ ಸ್ಥಳಕ್ಕೆ ಮಕ್ಕಳು ಮತ್ತು ಗರ್ಭಿಣಿಯರ ಜೊತೆ ಪ್ರಯಾಣಿಸಲು ಬಳಸಿಕೊಳ್ಳಬಹುದು.

**ಲಸಿಕಾ ಸತ್ರದ ಮೇಲ್ವಿಚಾರಣೆ ಮತ್ತು ವರದಿ ಮಾಡುವುದು :-**

1. ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ಸಮಯದಲ್ಲಿ ಎಲ್ಲಾ ಸಾರ್ವತ್ರಿಕ ಲಸಿಕಾ ಸತ್ರಗಳ ಮೇಲ್ವಿಚಾರಣಾ ಸಿಬ್ಬಂದಿ (ವೈದ್ಯಾಧಿಕಾರಿಗಳು, ತಾಲ್ಲೂಕು ಆರೋಗ್ಯ ಅಧಿಕಾರಿಗಳು) ಮೇಲ್ವಿಚಾರಣೆ ನಡೆಸುವುದು.
2. ಲಸಿಕಾ ಸತ್ರ ನಡೆಸಲು ಮತ್ತು ಯೋಜನೆಗಳನ್ನು ಸಿದ್ಧಪಡಿಸಲು ಲಸಿಕಾ ಕ್ಷೇತ್ರ ಕಾರ್ಯಕರ್ತರು (ಐಎಫ್‌ವಿ) ಬೆಂಬಲಿಸುವುದು ಮತ್ತು ಲಸಿಕಾ ಕ್ಷೇತ್ರ ಕಾರ್ಯಕರ್ತರು (ಐಎಫ್‌ವಿ) ಗುರುತಿನ ಚೀಟಿ ನೀಡುವುದು.
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಆರ್‌ಸಿಹೆಚ್ ಅಧಿಕಾರಿಗಳು ಲಸಿಕಾ ಕಾರ್ಯಕ್ರಮದ ಬಗ್ಗೆ ಒಟ್ಟಾರೆ ಉಸ್ತುವಾರಿ ವಹಿಸುವುದು.
4. ಎಲ್ಲಾ ಸೇವೆಗಳನ್ನು ನಿಯಮಿತವಾಗಿ ಹೆಚ್‌ಎಂಐಎಸ್ ಪೋರ್ಟಲ್, ಆರ್‌ಸಿಹೆಚ್ ಪೋರ್ಟಲ್ ಮತ್ತು ಇ-ವಿನ್ ನಲ್ಲಿ ಇಂದೀಕರಿಸುವುದು.

23/4/2020

ಉಪ ನಿರ್ದೇಶಕರು (ಲಸಿಕೆ)
ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ
ಬೆಂಗಳೂರು